# ಕರ್ನಾಟಕ ಸರ್ಕಾರ

ನಿರ್ದೇಶಕರಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು –12

E-mail: commissioner.pue.@gmail.com *Ph: No. 23361857, 23361858* Fax-23361852

ಸಂಖ್ಯೆ : ಪಪೂಶಿ ಆಶಾ (ನಿ) ಇತರೆ /2022–23 ದಿನಾಂಕ: 26.08.2022.

## ಪತ್ರಿಕಾ ಪ್ರಕಟಣೆ

ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರ ಹುದ್ದೆಗೆ ನೇಮಕಾತಿ ಕುರಿತು ಹೆಚ್ಚುವರಿ ಪಟ್ಟಿಯಲ್ಲಿನ ಅಭ್ಯರ್ಥಿಗಳ ಆಯ್ಕೆ ಬಗ್ಗೆ ಈ ಕಚೇರಿ ಪತ್ರ ಸಂಖ್ಯೆ: ಪಿಯು 187 ಸಿಬ್ಬಂದಿ ಸಿಆರ್ 3 ಉನೇ 2015–16 (ಹೆಚ್ಚುವರಿ ಆಯ್ಕೆ ಪಟ್ಟಿ) ದಿನಾಂಕ: 22.08.2022 ರಂದು ಪ್ರಕಟಿಸಲಾದ ಅಭ್ಯರ್ಥಿಗಳ ಪಟ್ಟಿಯಲ್ಲಿ ನ್ಯೂನ್ಯತೆಗಳಿವೆ ಎಂದು ಕೆಲವು ಅಭ್ಯರ್ಥಿಗಳು ದಿನಾಂಕ: 25.08.2022 ರಂದು ಮಾನ್ಯ ಶಾಲಾಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ಸಚಿವರಿಗೆ ಮನವಿಗಳನ್ನು ಸಲ್ಲಿಸಿರುತ್ತಾರೆ. ಇಂತಹ ಮನವಿಗಳನ್ನು ಪರಿಗಣಿಸಿ ಮಾನ್ಯ ಸಚಿವರು ಇಲಾಖೆಯಿಂದ ಪ್ರಕಟಿಸಿರುವ ಪಟ್ಟಿಯನ್ನು ಮರುಪರಿಶೀಲಿಸಲು ದಿನಾಂಕ: 26.08.2022 ರಂದು ನಿರ್ದೇಶಿಸಿರುತ್ತಾರೆ.

ಅದರಂತೆ ಪರಿಶೀಲಿಸಲಾಗಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸಲ್ಲಿಸಿರುವ ಪಟ್ಟಿಯಲ್ಲಿ ಉಲ್ಲೇಖಿಸಲಾದ ಮೀಸಲಾತಿ ಗುಂಪನ್ನು ಯಥಾವತ್ತಾಗಿ ಪರಿಗಣಿಸಲಾಗಿದ್ದು, ನ್ಯೂನ್ಯತೆಯನ್ನು ಸರಿಪಡಿಸಲು ದಿನಾಂಕ: 22.08.2022 ರಂದು ಪ್ರಕಟಿಸಲಾಗಿರುವ ಪಟ್ಟಿಯನ್ನು ಹಿಂಪಡೆಯಲಾಗಿದೆ. ಕರಡು ಪರಿಷ್ಕೃತ ಪಟ್ಟಿಯನ್ನು ಶೀಘ್ರದಲ್ಲಿ ಪ್ರಕಟಿಸಿ, ಆಕ್ಷೇಪಣೆಗಳನ್ನು ಆಹ್ವಾನಿಸಿ, ನಂತರ ಅಂತಿಮಗೊಳಿಸಲಾಗುವುದು

26/8/22

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.